**ದಿನಾಂಕ 07.11.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್‌ಎಸ್‌ಎ ವಕೀಲರಿಂದ**

ವಾದಿಗೆ ವಿಭಾಗ ಪಟ್ಟಿಯಲ್ಲಿ ಸರ್ವೆ ನಂಬರ್ 4 ರಲ್ಲಿ ಹಿತ್ತಲ ಹೊಲದಲ್ಲಿ 3 ಗುಂಟೆ ಬಂದಿತ್ತು ಎಂದರೆ ಸಾಕ್ಷಿ ವಿಭಾಗ ಪಟ್ಟಿಯಲ್ಲಿ ತಲಾ 3 ಗುಂಟೆ ಬರೆದಿದ್ದು ಪಹಣಿ ಬರೆಯುವಾಗ ತಲಾ 1 ಗುಂಟೆ ಬಂದಿತ್ತು ಎಂದು ಹೇಳುತ್ತಾರೆ. ವಾದಿಗೆ ಸರ್ವೆ ನಂಬರ್ 15 ರಲ್ಲಿ 19 ಗುಂಟೆ ಬಂದಿದೆ ಎಂದರೆ ಸರಿ. ಸರ್ವೆ ನಂಬರ್ 15 ರಲ್ಲಿ ತೋಟದ ಜಮೀನು 1 ವರೆ ಗುಂಟೆ ವಾದಿಗೆ ಬಂದಿದೆ ಎಂದರೆ ಸರಿ. ಸರ್ವೆ ನಂಬರ್ 15 ರಲ್ಲಿ ಹುಲಿ ಮೇವಿನ ಹೊಲದಲ್ಲಿ 20 ಗುಂಟೆ ಆಸ್ತಿ ಬಂದಿದೆ ಎಂದರೆ ಸರಿ. ಸರ್ವೆ ನಂಬರ್ 18/1 ರಲ್ಲಿ 6 ಗುಂಟೆ ವಿಸ್ತೀರ್ಣ ವಾದಿಯ ಹೆಸರಿಗೆ ವಿಭಾಗ ಪಟ್ಟಿಯಲ್ಲಿ ಬಂದಿದೆ ಎಂದರೆ ಸರಿ. ಬಕರೆ ಹೊಲದಲ್ಲಿ ಸರ್ವೆ ನಂಬರ್ 21 ರಲ್ಲಿ 39 ಗುಂಟೆ ವಿಸ್ತೀರ್ಣ ವಾದಿಯ ಹೆಸರಿಗೆ ವಿಭಾಗ ಪಟ್ಟಿಯಲ್ಲಿ ಬಂದಿದೆ ಎಂದರೆ ಸರಿ. ಸರ್ವೆ ನಂಬರ್ 28 ರೈಲು ಮಾರ್ಗದ ಹೊಲದಲ್ಲಿ 15 ಗುಂಟೆ ಜಮೀನು ವಾದಿಗೆ ವಿಭಾಗ ಪಟ್ಟಿಯಲ್ಲಿ ಬಂದಿದೆ ಎಂದರೆ ಸರಿ. ಈಗ ಮೇಲೆ ಕೇಳಿರುವ ಸರ್ವೆ ನಂಬರ್ ಮತ್ತು ವಿಸ್ತೀರ್ಣಗಳು ವಾದಿಯ ಹೆಸರಿಗೆ ಬಂದಿರುವ ಕುರಿತಾಗಿ ನನ್ನದು ತಕರಾರು ಇಲ್ಲ ಎಂದರೆ ಸರಿ. ಸರ್ವೆ ನಂಬರ್ 95 ಬಾರೆ ಹೊಲ ಈಗ ಹೊಸ ಸರ್ವೆ ನಂಬರ್ 107 ಎಂದು ಆಗಿದೆ ಎಂದರೆ ಸರಿ. ಸರ್ವೆ ನಂಬರ್ 107 ರಲ್ಲಿ ವಾದಿಯ ಹೆಸರಿಗೆ 2 ಎಕರೆ ಬರೆದಿತ್ತು ಎಂದರೆ ಸರಿಯಲ್ಲ. ವಿಭಾಗ ಪಟ್ಟಿಯಲ್ಲಿ ವಾದಿಯ ಹೆಸರಿಗೆ ಸರ್ವೆ ನಂಬರ್ 21 ರಲ್ಲಿ 1 ಎಕರೆ ವಿಸ್ತೀರ್ಣವನ್ನು ವಾದಿ ಮತ್ತು ಪ್ರತಿವಾದಿಗಳ ತಂದೆ ತಾಯಿಗಳಿಗೆ ಬಿಟ್ಟಿರುವ ಬಗ್ಗೆ ಷರಾ ಬರೆದಿದೆ ಎಂದರೆ ಸರಿ. ತಂದೆ ತಾಯಿಗೆ ಬಿಟ್ಟ ಆಸ್ತಿಯಲ್ಲಿ ವಾದಿ ಮತ್ತು ಪ್ರತಿವಾದಿಗಳು ತಂದೆ ತಾಯಿಗಳ ಮರಣಾ ನಂತರ 4 ಗುಂಟೆ ಆಸ್ತಿ ಬಿಟ್ಟು ಉಳಿದ ವಿಸ್ತೀರ್ಣವನ್ನು ಸಮನಾಗಿ ಹಂಚಿಕೊಳ್ಳಬೇಕೆಂದು ಷರಾ ಬರೆದಿದೆ ಎಂದರೆ ಸರಿ. ಸರ್ವೆ ನಂಬರ್ 95 ನ್ನು ಹೊರತು ಪಡಿಸಿ ಉಳಿದೆಲ್ಲಾ ಸರ್ವೆ ನಂಬರ್ ಗಳ ಖಾತೆ ನನ್ನ ವಿಸ್ತೀರ್ಣಕ್ಕೆ ನನಗೆ ಬಂದಿದೆ ಎಂದರೆ ಸರಿ. ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣವನ್ನು ನಾನು ನನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ ಅದನ್ನು ನನ್ನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ಉಳಿಕೆ ಆಸ್ತಿಗಳನ್ನು ನನ್ನ ಮಕ್ಕಳು ಕೆಲಸ ಮಾಡಲಿ ಎಂದು ಕೊಟ್ಟಿಲ್ಲ. ವಾದಿ ಸರ್ವೆ ನಂಬರ್ 95 ಕ್ಕೆ ತಕರಾರು ಮಾಡಿದ್ದರಿಂದ ನನ್ನ ಮಕ್ಕಳ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ರಲ್ಲಿ ವಾದಿಯ ಹೆಸರಿಗೆ ಬಂದ 2 ಎಕರೆ ಎನ್ನುವುದನ್ನು 1 ಎಕರೆ ಎಂದು ತಿದ್ದುಪಡಿ ಆಗಿರುವುದು ನನ್ನ ಹೆಸರಿಗೆ 1 ಎಕರೆ ಎಂದು ಇದ್ದದ್ದು 2 ಎಕರೆ

ಎಂದು ತಿದ್ದುಪಡಿ ಮಾಡಿರುವುದನ್ನು ಷರಾ ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ತಂದೆ ಇದ್ದಾಗಲೇ ವಾದಿಗೆ 1 ಎಕರೆ ನನಗೆ 2 ಎಕರೆ ಎಂದು ಬರೆದಿತ್ತು ಸಾಕ್ಷಿ ಸ್ವತಃ ತಿದ್ದುಪಡಿ ಮಾಡಿಲ್ಲ ಎಂದು ಹೇಳುತ್ತಾರೆ. ನನಗೆ ನನ್ನ ತಂದೆಯ ಕಡೆಯಿಂದ ಒಟ್ಟು ಎಲ್ಲಾ ಸರ್ವೆ ನಂಬರ್ ಗಳಿಂದ 4 ಎಕರೆ ಚಿಲ್ಲರೆ ಬಂದಿದೆ. 1 ನೇ ಪ್ರತಿವಾದಿರವರಿಗೆ 3 ಎಕರೆ 35 ಗುಂಟೆ ಬಂದಿರಬಹುದು. ವಾದಿಯವರಿಗೂ 3 ಎಕರೆ ಚಿಲ್ಲರೆ ಬಂದಿರಬಹುದು. ನನ್ನ ತಂದೆ ತಾಯಿ ನನ್ನ ಬಳಿ ಇದ್ದುದರಿಂದ ನಾನು ಓದದೇ ಇರುವುದರಿಂದ ನನ್ನ ತಂದೆಯ ಮಗಳ ಮಗಳನ್ನು ನಮ್ಮ ಮನೆಯಲ್ಲೆ ಇಟ್ಟುಕೊಂಡಿರುವುದರಿಂದ 1 ಎಕರೆ ಆಸ್ತಿ ನನಗೆ ಹೆಚ್ಚಾಗಿ ನನ್ನ ತಂದೆಯವರೆ ಬರೆದಿದ್ದರು ಎಂದು ಹೇಳುತ್ತಾರೆ. ವಿಭಾಗ ಪಟ್ಟಿಯಲ್ಲಿ ನನಗೆ 1 ಎಕರೆ ಹೆಚ್ಚಾಗಿ ಕೊಡುವುದನ್ನು ಬರೆಯಲಿಲ್ಲ. ನಾನು ನನ್ನ ಜಮೀನಿನ ಖಾತೆ ಮಾಡಿಸಲು ವಾದಿಯನ್ನು ಕರೆದುಕೊಂಡು ಹೋಗಿಲ್ಲ. ಮೂಲ ವಿಭಾಗ ಪತ್ರ ನನ್ನ ಬಳಿ ಇದ್ದುದರಿಂದ ಅದನ್ನು ನಾನೇ ತೆಗೆದುಕೊಂಡು ಹೋಗಿ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಯು 1979 ರಿಂದ ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣದಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ನನ್ನ ಮಕ್ಕಳು ಮಾವಿನ ಗಿಡ ಹಾಕಿ ಸ್ವಾಧೀನ ಹೊಂದಿದ್ದಾರೆಂದು ಹೇಳುತ್ತಾರೆ. ಸರ್ವೆ ನಂಬರ್ 95 ರಲ್ಲಿ 1 ಎಕರೆ ವಿಸ್ತೀರ್ಣದಲ್ಲಿ ನನ್ನ ಮಕ್ಕಳು ಮಾವಿನ ಗಿಡ ಮತ್ತು ರೇಶ್ಮೆ ಬೆಳೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ಹೊಸ ಸರ್ವೆ ನಂಬರ್ 107 ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸರಕಾರಿ ನೌಕರರಾಗಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ನಿವೃತ್ತರಾಗುವವರೆಗೂ ಅವರ ಪಾಲಿನ ಜಮೀನನ್ನು ನನಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ಅವರೇ ಮಾಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಒಟ್ಟಿಗೆ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ಜಮೀನಿನ ವಿಭಾಗ ಮಾಡಿಕೊಂಡಾಗಲೇ ಪ್ರತ್ಯೇಕವಾಗಿ ಇದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ ತಾಯಿಯನ್ನು ವಾದಿ ಇಟ್ಟುಕೊಂಡು ಪೋಷಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ನಮ ನಡುವೆ ವೈ ಮನಸ್ಸು ಇದು ಬೇರೆ ಇದ್ದೇವೆ ಎಂರೆ ಸರಿಯಲ್ಲ. ಮಂಗಳೂರು ಹೆಂಚಿನ ಮನೆಯನ್ನು ನಾನು ಮತ್ತು ವಾದಿ ಸೇರಿ ಕಟ್ಟಿದ್ದೇವೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ನಾನೇ ಕಟ್ಟಿದ್ದೇನೆ ಎಂದು ಹೇಳುತ್ತಾರೆ. ಹೆಂಚಿನ ಮನೆಯಲ್ಲಿ ನನಗೂ ಮತ್ತು ವಾದಿಗೂ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ವಾದಿ ಮಂಗಳೂರು ಹೆಂಚಿನ ಮನೆ ನನಗೆ ಸೇರಬೇಕೆಂದು ಒಂದು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಹಾಜರು ಮಾಡಲು ತೊಂದರೆ ಇಲ್ಲ. ಮಂಗಳೂರು ಹೆಂಚಿನ ಮನೆಯನ್ನು ವಾದಿಯ ಹೆಸರಿಗೆ ಖಾತೆ ಪೂರ್ವದಲ್ಲೆ

ಬಿಟ್ಟುಕೊಡುತ್ತೇನೆಂದು ಪಂಚಾಯತಿಯಲ್ಲಿ ಹೇಳಿದ್ದೆನು ಎಂದರೆ ಸರಿಯಲ್ಲ. ವಿಭಾಗ ಪಟ್ಟಿಯನ್ನು ಬರೆದಿರುವ ಬಗ್ಗೆ ವಾದಿಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ ವಾದಿಗೆ ಅಣ್ಣಂದಿರಾಗಬೇಕು ಎಂದರೆ ಸರಿ. ನಾನು ವಾದಿಗೆ ಅಣ್ಣನಾದ್ದರಿಂದ ವಾದಿಯ ಸಹಿಯನ್ನು ವಾದಿಗೆ ತಿಳಿಸದೇ ವಿಭಾಗ ಪಟ್ಟಿಗೆ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ವಿಭಾಗ ಪತ್ರ ನನ್ನ ಬಳಿ ಈಗಲೂ ಇದೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ವಾದಿಯ ಬಳಿ ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 95 ರಲ್ಲಿ 1 ಎಕರೆ ವಿಸ್ತೀರ್ಣವನ್ನು ವಾದಿಗೆ ನಾನು ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಸರ್ವೆ ನಂಬರ್ 95 ರಲ್ಲಿ 2 ಎಕರೆ ಬರಬೇಕು ಎಂದು ಕೇಳಿದಾಗ ನಾನು ಉಡಾಫೆಯಿಂದ ವರ್ತಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 10 ನ್ನು ವಾದಿಗೆ ಅರ್ಧ 1 ನೇ ಪ್ರತಿವಾದಿಗೆ ಅರ್ಧ ಎಂದು ದನ ಕರು ಕಟ್ಟಿಕೊಳ್ಳಲು ಕೊಟ್ಟಿತ್ತು ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 9 ವಾದಿಗೆ ಮತ್ತು ನನಗೆ ಬಿಟ್ಟಿದ್ದರು ಎಂದರೆ ಸರಿಯಲ್ಲ. ವಾದಿಯು ಈಗಲೂ ದನ ಕರುಗಳನ್ನು ಕಟ್ಟುವ ಕೊಟ್ಟಿಗೆ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅವರು ನಾಡ ಹೆಂಚಿನ ಮನೆಯಲ್ಲಿ ವಾಸ ಇದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣಕ್ಕೆ ನನಗೂ ಮತ್ತು ಪ್ರತಿವಾದಿಗೂ ತಕರಾರು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ತಿಳುವಳಿಕೆ ಇಲ್ಲ ಎಂದು ಆತನಿಗೆ ಬಂದ ಆಸ್ತಿಯಲ್ಲಿ ನಾವೇ ತಿದ್ದಿ ಖಾತೆ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ಹೊರತು ಪಡಿಸಿ ಇತರ ಜಮೀನುಗಳನ್ನು ಇಲ್ಲಿಯವರೆಗೂ ನಾವು ಅಳತೆ ಮಾಡಿಸಿಕೊಂಡಿಲ್ಲ. ವಾದಿಯ ಹೆಸರಿಗೆ ಬಂದ ಜಮೀನನ್ನು ಅಕ್ರಮವಾಗಿ ಹೊಡೆದುಕೊಳ್ಳಲು ತಿದ್ದುಪಡಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**